ಯಾರಾದರೂ ಸಿಗುತ್ತಾರೆಯೇ ಎಂದು ಹುಡುಕುತ್ತಿದ್ದ. ತಿಮ್ಮ ಅವನ ಬಳಿಗೆ ಹೋಗಿ ಕೆಲಸ ಕೇಳಿದ. ರೈತ ಅವನನ್ನು ತೋಟ ಕಾಯಲು ನೇಮಿಸಿಕೊಂಡ. 'ಎಚ್ಚರಿಕೆಯಿಂದ ತೋಟವನ್ನು ರಕ್ಷಿಸಬೇಕು. ನಿನ್ನ ನಿಷ್ಠೆಯನ್ನು ನೋಡಿ ಸಂಬಳ ನಿರ್ಧರಿಸುತ್ತೇನೆ' ಎಂದು ಹೇಳಿದ.

ಹೀಗೇ ದಿನಗಳು ಉರುಳಿದವು. ರೈತನಿಗೆ ಕೆಲವು ಮಂದಿ ಕೆಟ್ಟ ಮಿತ್ರರಿದ್ದರು. ಅವರು, 'ನಿನ್ನ ತೋಟದ ಕಾವಲುಗಾರನನ್ನು ಗಮನಿಸಿದ್ದೀಯಾ? ದಾರಿಹೋಕರಿಗೆ ಹಣ್ಣುಗಳನ್ನು ಮಾರಾಟ ಮಾಡಿ, ಹಣ ಗಳಿಸುತ್ತಾನೆ. ಅವನ ತಲೆದಿಂಬನ್ನು ಪರೀಕ್ಷಿಸು. ಅದರಲ್ಲಿ ಚಿನ್ನದ ನಾಣ್ಯಗಳಿವೆ' ಎಂದು ಕಿವಿಯೂದಿದರು.

ರೈತ ತಿಮ್ಮನನ್ನು ಪರೀಕ್ಷಿಸಲು ನಿರ್ಧರಿಸಿದ. ಶ್ರೀಮಂತ ವ್ಯಾಪಾರಿಯ ವೇಷ ತೊಟ್ಟು, ಕುದುರೆಯನ್ನೇರಿ ಕಡು ಬಿಸಿಲಿನಲ್ಲಿ ತಿಮ್ಮನ ಬಳಿಗೆ ಬಂದ. 'ತುಂಬ ದಣಿದಿದ್ದೇನೆ. ಸಿಹಿಯಾದ ಹಣ್ಣುಗಳನ್ನು ತಂದುಕೊಡು. ನಿನಗೆ ಚಿನ್ನದ ನಾಣ್ಯಗಳನ್ನು ಕೊಡುತ್ತೇನೆ' ಎಂದು ಹೇಳಿದ.

'ಇಲ್ಲ, ನಾನು ಆ ಕೆಲಸ ಮಾಡುವುದಿಲ್ಲ. ನನಗೆ ಅನ್ನ ಕೊಡುವ ಮಾಲೀಕರ ತೋಟ ಕಾಯುವ ಕೆಲಸ ಮಾತ್ರ ನನ್ನದು. ಚಿನ್ನವಲ್ಲ, ಬೇರೆ ಏನು ಕೊಟ್ಟರೂ ನಾನು ಹಣ್ಣು ತಂದು ಕೊಡಲಾರೆ' ಎಂದು ತಿಮ್ಮ ಸ್ಪಷ್ಟವಾಗಿ ಹೇಳಿದ.



'ಹೋಗಲಿ, ಸಿಹಿಯಾದ ಹಣ್ಣುಗಳು ಯಾವ ಮರದಲ್ಲಿವೆ ಎಂಬುದನ್ನು ಹೇಳುತ್ತೀಯಾ?' ಎಂದು ಕೇಳಿದ ರೈತ.

'ಅದೂ ನನಗೆ ಗೊತ್ತಿಲ್ಲ. ನಾನು ಇಲ್ಲಿನ ಯಾವ ಮರದ, ಯಾವ ಹಣ್ಣಿನ ರುಚಿಯನ್ನೂ ನೋಡಿಲ್ಲ' ಎಂದ ತಿಮ್ಮ.

ರೈತ ಹುಬ್ಬೇರಿಸಿದ. 'ನೀನು ದೊಡ್ಡ ಪ್ರಾಮಾಣಿಕನೆಂದು ಬೊಗಳೆ ಬಿಡಬೇಡ. ಗುಟ್ಟಾಗಿ ಹಣ್ಣುಗಳನ್ನು ಮಾರಾಟ ಮಾಡಿ ಸಂಪಾದಿಸಿದ ಹಣವನ್ನು ತಲೆದಿಂಬಿನ ಒಳಗೆ ಇಟ್ಟುಕೊಂಡಿರುವ ನಿನ್ನ ಕುತಂತ್ರ ನನಗೆ ತಿಳಿಯದೆಂದು ಭಾವಿಸಬೇಡ' ಎಂದು ಕೋಪದಿಂದ ಹೇಳಿದ.

'ಸ್ವಲ್ಪ ನಿಲ್ಲಿ' ಎಂದು ಹೇಳಿ ತಿಮ್ಮ ತನ್ನ ತಲೆದಿಂಬನ್ನು ತಂದು ಕತ್ತಿಯಿಂದ ಸೀಳಿದ. ಅದರ ತುಂಬ ಕಲ್ಲಿನ ಹರಳುಗಳಿದ್ದವು. ರೈತ ವಿಸ್ಮಿತನಾದ. 'ತಲೆದಿಂಬಿನೊಳಗೆ ಇಷ್ಟೊಂದು ಕಲ್ಲುಗಳನ್ನು ಯಾಕೆ ಇರಿಸಿಕೊಂಡಿರುವೆ?' ಎಂದು ಕೇಳಿದ.

'ನನ್ನ ಅಮ್ಮ ಸಾಯುವಾಗ ನನಗೆ ಕೊಟ್ಟ ಆಸ್ತಿಯೆಂದರೆ ಪ್ರಾಮಾಣಿಕವಾಗಿ ಬದುಕಬೇಕೆಂಬ ಆಶೀರ್ವಾದ. ಒಂದು ದಿನ ಪ್ರಾಮಾಣಿಕನಾಗಿ ಕಳೆದ ಕೂಡಲೇ ದಿನಕ್ಕೊಂದರಂತೆ ಒಂದು ಕಲ್ಲನ್ನು ತಲೆದಿಂಬಿನೊಳಗೆ ಇಡುತ್ತಿದ್ದೆ. ಹೀಗೆ ತಾಯಿಯ ಮಾತು ಮೀರದೆ ಬದುಕಿದ ನೆನಪಿಗಾಗಿ ಇರಿಸಿದ ಕಲ್ಲುಗಳನ್ನು ತಲೆಯ ಕೆಳಗೆ ಇರಿಸಿಕೊಂಡು ಮಲಗಿದರೆ ಅವು ಪ್ರಾಮಾಣಿಕತೆ ಬಿಡಬೇಕೆಂಬ ಯೋಚನೆ ಬರದಂತೆ ತಲೆಗೆ ಚುಚ್ಚುತ್ತಲೇ ಇರುತ್ತವೆ' ಎಂದು ಹೇಳಿದ ತಿಮ್ಮ.

ರೈತನ ಕಣ್ಣು ಮಂಜಾಯಿತು. ತನ್ನ ವೇಷವನ್ನು ಕಳಚಿ ತಿಮ್ಮನನ್ನು ಬಿಗಿದಪ್ಪಿಕೊಂಡ. 'ನಿನ್ನಂತಹ ನಿಷ್ಠಾವಂತ ಕಾವಲುಗಾರನಾಗಿದ್ದರೆ ಸಾಲದು, ಅದರ ಒಡೆಯನಾಗಬೇಕು. ನನ್ನ ಒಬ್ಬಳೇ ಮಗಳ ಕೈ ಹಿಡಿದು ನಮ್ಮ ಸಂಸಾರದಲ್ಲಿ ನೀನೂ ಒಬ್ಬನಾಗು. ಇದು ನಿನಗೆ ನನ್ನ ಬಹುಮಾನ' ಎಂದು ಹೇಳಿ ಅವನನ್ನು ತನ್ನ ಅಳಿಯನನ್ನಾಗಿ ಮಾಡಿಕೊಂಡ. ತಾಯಿ ಕೊಟ್ಟ ಕಾಣಿಕೆ ಅವನ ಬದುಕಿಗೆ ಹೊಸ ದಿಕ್ಕು ತೋರಿಸಿತು.